'ವ ಅಲೈಕುಂ ಸಲಾಂ... ಹುಡುಗ ಬಂದಿದ್ದಾನಾ...?'

'ಹೌದು... ಕೋಣೆಯಲ್ಲಿದ್ದಾನೆ... ಬನ್ನಿ.'

ಖಾಜಿ ಸಾಹೇಬರನ್ನು ಕೋಣೆಯೊಳಗೆ ಸಾಹುಕಾರರು ಕರೆತಂದರು.

ಅಬ್ದುಲ್ಲಾ ಎದ್ದು ನಿಂತ.

ಖಾಜಿ ಸಾಹೇಬರು ಅಬ್ದುಲ್ಲಾನನ್ನೊಮ್ಮೆ ದಿಟ್ಟಿಸಿ ನೋಡಿದರು.

'ಎಲ್ಲಾ ತಯಾರಾಗಿದೆಯಲ್ಲಾ?'

'ಹೌದು' ಎಂದು ಸಾಹುಕಾರರು ತಲೆಯಾಡಿಸಿದರು.

'ನೀನು ಹೋಗಿ ವಝೂ ಮಾಡಿ ಬಾ...' ಎಂದು ಅಬ್ದುಲ್ಲಾನಿಗೆ ಖಾಜಿ ಸಾಹೇಬರು ಆದೇಶ ಇತ್ತರು.

ಅಬ್ದುಲ್ಲಾನಿಗೆ ಮುಖಕ್ಕೆ ಹಾಕಿದ ಯಾರ್ಡ್ಲಿ ಪೌಡರು ವ್ಯರ್ಥವಾಯಿತಲ್ಲಾ ಎಂಬ ಸಣ್ಣ ವ್ಯಥೆ, ಅನಿವಾರ್ಯ. ಬಾತ್‌ರೂಮಿಗೆ ಹೋಗಿ ಶಾಸ್ತ್ರೋಕ್ತವಾಗಿ ಕೈಕಾಲು ಮುಖ ತೊಳೆದು 'ವಝೂ' ಮುಗಿಸಿ ಬಂದ.

ಖಾನ್ ಸಾಹೇಬರು ಕೂಡಾ ವಝೂ ಮಾಡಿ ಬಂದರು.

ಇಬ್ಬರೂ ಮಂಚದ ಮೇಲೆ ಎದುರು ಬದುರಾಗಿ ಕೂತು ಕೈಯ ಮೇಲೆ ಕೈಯಿಟ್ಟು ಖಾಜಿ ಸಾಹೇಬರು ಹೇಳಿಕೊಟ್ಟಂತೆ ಹೇಳಿದರು.

'ನನ್ನ ಮಗಳು ಸಲ್ಮಾಳನ್ನು 21 ಬಿರ್‍ಯಾನ್ ಮಹರಿನ ಮೇಲೆ ನಿನಗೆ ವಿವಾಹ ಮಾಡಿಕೊಡುತ್ತಿದ್ದೇನೆ...'

'ನಿಮ್ಮ ಮಗಳು ಸಮಾಳನ್ನು 21 ಬಿರ್‍ಯಾನ್ ಮಹರಿನ ಮೇಲೆ ನಿಕಾಹ್ ಮಾಡಿಕೊಂಡು ಒಪ್ಪಿರುತ್ತೇನೆ.'

ಖಾಜಿ ಸಾಹೇಬರು ನಂತರ ಶಾಸ್ತ್ರ ಓದಿದರು.

ನಿಕಾಹ್ ರಿಜಿಸ್ಟರಿನಲ್ಲಿ ಸಹಿಯೂ ಆಯಿತು.

ಅಬ್ದುಲ್ಲಾ ಕುತ್ತಿಗೆಗೊಂದು ಮಲ್ಲಿಗೆ ಹೂ ಮಾಲೆಯೂ ಬಿತ್ತು.

ಖಾನ್ ಸಾಹೇಬರ ಆದೇಶದಂತೆ ಮದುಮಗಳ ಕೋಣೆಗೆ ಬಂದ.

ಮಂಚದ ಮೇಲೆ ಸಲ್ಮಾ ತಲೆ ತಗ್ಗಿಸಿ ನೆಲವನ್ನು ನೋಡುತ್ತಾ ಕುಳಿತಿದ್ದಳು.

ಹೆಚ್ಚಿನ ಶೃಂಗಾರವಿರಲಿಲ್ಲ. ಬಿಳಿಸೀರೆ, ಬಿಳಿ ಕುಪ್ಪಸ, ತಲೆಯ ಮೇಲೆ ಮುಖ ಬಿಟ್ಟು ಇಳಿಬಿಟ್ಟ ಬಿಳಿ ರುಮಾಲು. ಸಲ್ಮಾ ತುಂಬಾ ಸುಂದರಿ.

ಹಿಂತಿರುಗಿ ನೋಡಿದ. ಸಾಹುಕಾರರು ಆಗಲೇ ಕೋಣೆ ಬಿಟ್ಟು ದೂರ ಹೋಗಿದ್ದರು. ಕುತ್ತಿಗೆಯಲ್ಲಿದ್ದ ಮಲ್ಲಿಗೆ ಹೂ ಮಾಲೆಯನ್ನು ತೆಗೆದು ಅವಳ ಕುತ್ತಿಗೆಗೆ ಹಾಕಿದ.

ಮೌನ...

ಮಂಚದ ಮೇಲೆ ಅವಳಿಗಿಂತ ಸ್ವಲ್ಪ ದೂರದಲ್ಲಿ ಕೂತ.

ಎದುರಿಗೆ ಟೀಪಾಯಿಯ ಮೇಲೆ ಒಂದು ಗ್ಲಾಸು ಹಾಲು, ಹರಿವಾಣ ತುಂಬ ಕಿತ್ತಳೆ ಹಣ್ಣು, ಸೇಬು, ದ್ರಾಕ್ಷಿ, ಬಾಯಲ್ಲಿ ನೀರೂರಿತು. ತಡೆದುಕೊಂಡ.

ಸಲ್ಮಾ ಮಾತಾಡಲಿಲ್ಲ.

ಅರಳು ಹುರಿದಂತೆ ಮಾತಾಡುತ್ತಿದ್ದ ಸಲ್ಮಾ ಈಗ ಮೌನಿ.

'ಸಲ್ಮಾ...' ಎಂದು ಮೆಲ್ಲನೆ ಕರೆದ. ಸಲ್ಮಾ ತಲೆಎತ್ತಿ ಅವನನ್ನು ನೋಡಿದಳು.